## ಕೂಗು

ಎಲ್ಲರಿಂದಲೂ
ಮಕ್ಕಳಿಲ್ಲದ ಬಂಜೆಯೆಂದು
ಹೀಯಾಳಿಸಲ್ಪಡುತ್ತಿದ್ದ
ಅವಳನ್ನು ಮನೆಯ
ಹೊರಗಿನಿಂದ
ಭಿಕ್ಷುಕನೊಬ್ಬ 'ಅಮ್ಮಾ'
ಎಂದು ಕೂಗಿದ.



## ಗುರಿ

ಅವನಿಗೆ ಕಾಲುಗಳಿಲ್ಲ, ಇವನಿಗೆ ಎರಡೂ ಕಣ್ಣುಗಳಿಲ್ಲ. ಇಬ್ಬರೂ ಒಂದೇ ಮಾರ್ಗದಲ್ಲಿ ಕಷ್ಟಪಟ್ಟು ಸಾಗುತ್ತಿದ್ದರು. ದಾರಿಹೋಕನೊಬ್ಬ ಅವರಿಗೆ ಉಪಾಯ ಹೇಳಿದ. ಕಣ್ಣಿಲ್ಲದವನು ಕಾಲುಗಳಿಲ್ಲದ ಹುಡುಗನನ್ನು ಹೆಗಲ ಮೇಲೆ ಕೂರಿಸಿಕೊಂಡ. ಒಬ್ಬ ಮಾರ್ಗದರ್ಶನ ಮಾಡುತ್ತಿದ್ದ, ಮತ್ತೊಬ್ಬ ನಡೆಯುತ್ತಿದ್ದ. ಬಹಳ ಬೇಗನೇ ಇಬ್ಬರೂ ತಮ್ಮ ಗುರಿ ತಲುಪಿದರು.

★★★

## ದೇಶದ ದೊರೆ

ವಿಧಾನಸೌಧದ ಎದುರು ವ್ಯಕ್ತಿಯೊಬ್ಬ, 'ಇದು ಪ್ರಜಾಪ್ರಭುತ್ವ ರಾಷ್ಟ್ರ, ಇಲ್ಲಿ ಪ್ರಜೆಗಳೇ ಪ್ರಭುಗಳು, ನಾನು ಕೂಡಾ ಈ ದೇಶದ ದೊರೆ' ಎಂದು ಕೂಗಾಡುತ್ತಿದ್ದ. ಎಲ್ಲರೂ ಅವನನ್ನು ಹುಚ್ಚನಂತೆ ನೋಡುತ್ತಿದ್ದರು.

★★★

## ಕರೆ

'ಗೆಳೆಯ, ಜೀವನದ್ದೂದ್ದಕ್ಕೂ ನಿನಗೆ ದ್ರೋಹ ಮಾಡುತ್ತಲೇ ಬಂದಿದ್ದೇನೆ. ಮರಣಶಯ್ಯೆಯಲ್ಲಿರುವ ನನಗೆ ತುಂಬಾ ಪಶ್ಚಾತ್ತಾಪವಾಗುತ್ತಿದೆ. ನನ್ನನ್ನು ಒಂದು ಸಾರಿ ಕ್ಷಮಿಸಿದ್ದೇನೆ ಎಂದು ಹೇಳಿ ಬಿಡು' ಎಂದು ಯಾವುದೋ ಅಪರಿಚಿತ ನಂಬರ್‌ನಿಂದ ಬಂದ ಈ ಕರೆಗೆ 'ರಾಂಗ್ ನಂಬರ್' ಎಂದು ಹೇಳಲು ಇವನಿಗೆ ಮನಸ್ಸು ಬರಲಿಲ್ಲ. ಆ ಕಡೆಯಿಂದ ಯಾವುದೇ ಪ್ರತ್ಯುತ್ತರ ಬರಲಿಲ್ಲ. ಸ್ವಲ್ಪ ಸಮಯದ ನಂತರ ಹತ್ತಾರು ಜನರ ಆಕ್ರಂದನ ಕೇಳಿಸಿತು.

★★★